ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ
ಆನಂದರಾವ್ ವೃತ್ತ, ಬೆಂಗಳೂರು.-09

ಸಂಖ್ಯೆ: ಆಕುಕನಿ/ಆಪ್ತ/217/2019-20 ದಿನಾಂಕ:30/03/2020

**ಸುತ್ತೋಲೆ**

ಕೋವಿಡ್-19 ನಿಯಂತ್ರಣದ ಅವಧಿಯಲ್ಲಿ ಅನೇಕ ಪ್ರಯಾಣಿಕರನ್ನು 14 ರಿಂದ 28 ದಿನಗಳವರೆಗೆ ಗೃಹ ನಿರ್ಬಂಧನ (Home Quarantine) ಹಾಗೂ ಗೃಹ ಪ್ರತ್ಯೇಕತೆ (Home Isolation) ಮಾಡಲಾಗಿರುತ್ತದೆ. ಇಂತಂಹ ವ್ಯಕ್ತಿಗಳು ತಮ್ಮ ಗೃಹ ನಿರ್ಬಂಧನ (Home Quarantine) ಅವಧಿಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಿದ್ದಲ್ಲಿ, ತಮ್ಮ ದೈನಂದಿನ ಕೆಲಸ ಕಾರ್ಯಗಳಿಗೆ ಹಾಜರಾಗಲು ಸಂಪೂರ್ಣ ಅರ್ಹರಾಗಿರುತ್ತಾರೆ ಎಂದು ದೃಢೀಕರಣವನ್ನು ನೀಡಲು ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ದೃಢೀಕರಣ ಪತ್ರದ ಮಾದರಿಯನ್ನು ಅನುಬಂದ -1 ರಲ್ಲಿ ಲಗತ್ತಿಸಲಾಗಿದೆ.

ಈ ದೃಢೀಕರಣ ಪತ್ರವನ್ನು 28 ದಿನಗಳ ಅವಧಿಯ ಗೃಹ ನಿರ್ಬಂಧನ (Home Quarantine) ಹಾಗೂ ಗೃಹ ಪ್ರತ್ಯೇಕತೆ (Home Isolation) ಪೂರೈಸಿದ ನಂತರ ನೀಡಲು ಸೂಚಿಸಲಾಗಿದೆ.

O.Patil
ನಿರ್ದೇಶಕರು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು

**ಗೆ:**
1. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ,

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ.**
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
4. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,
--------- ಜಿಲ್ಲೆ.

ಸಂಖ್ಯೆ: / /2019-20 ದಿನಾಂಕ: / /2020

**ಅನುಬಂಧ-01**

## ಧೃಢೀಕರಣ ಪತ್ರ

ಶ್ರೀ/ಶ್ರೀಮತಿ/ಕುಮಾರ/ಕುಮಾರಿ.................................................... ತಂದೆ / ಗಂಡ / ಪೋಷಕರು ................................ ವಿಳಾಸ ............................. ಇವರು ದಿನಾಂಕ: ........................... ರಂದು ನಮ್ಮ ರಾಜ್ಯಕ್ಕೆ ಹೊರದೇಶದಿಂದ ಆಗಮಿಸಿದ್ದು / ಸೋಂಕಿತ ವ್ಯಕ್ತಿಗಳಿಂದ ಸೋಂಕನ್ನು ಪಡೆದು ಕೊಂಡಿರುವ ಪ್ರಾಥಮಿಕ ಸಂಪರ್ಕ ಹೊಂದಿರುವ ವ್ಯಕ್ತಿಗಳಾಗಿದ್ದು, ದಿನಾಂಕ:................. ರಿಂದ ದಿನಾಂಕ: .............................. ರವರೆಗೆ ಗೃಹ ನಿರ್ಬಂಧನ (Home Quarantine) / ಗೃಹ ಪ್ರತ್ಯೇಕತೆ (Home isolation) ಗೆ ಒಳಪಟ್ಟಿರುತ್ತಾರೆ, ಈ ಅವಧಿಯಲ್ಲಿ ಇವರಿಗೆ ಯಾವುದೇ ಕೋವಿಡ್-19 ಸೋಂಕಿತ ರೋಗ ಲಕ್ಷಣಗಳು ಕಂಡು ಬಂದಿಲ್ಲದೇ ಇರುವ ಪ್ರಯುಕ್ತ ಇವರು ಗೃಹ ಪ್ರತ್ಯೇಕತೆ (Home Quarantine) ಅವಧಿಯನ್ನು ತೃಪ್ತಿಕರವಾಗಿ ಪೂರೈಸಿ ತಮ್ಮ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅರ್ಹರಾಗಿರುತ್ತಾರೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸಹಿ/-
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು
----- ಜಿಲ್ಲೆ.